ಹೆಂಗಸರ ಮುಖಾನೇ ನೋಡಬಾರದು.''

''ಸ್ಸರಿ, ಮತ್ತೇನು?'' ಅಪ್ಪ ಸಿಡುಕಿದ.

''ಇನ್ನೇನಿಲ್ಲಾ, ಅಪ್ಪುಕುಟ್ಟ ಸ್ವಾಮೇರಿಗೆ ಒಂದು ಬಿಡಾರ ಬೇಕಂತೆ, ಅವ್ರ ಹೆಣ್ತಿ ಇರಕ್ಕೆ. ನಮ್ಮಲ್ಲಿ ಒಂದು ಕೋಣೆ ಖಾಲಿ ಇತ್ತಲ್ಲಾ, ಕೇಳು ಅಂದರು'' ಮೇಸ್ತ್ರಿ ಉತ್ತರಿಸಿದ.

''ಹೆಂಡ್ತಿ?'' ಆಶ್ಚರ್ಯದಿಂದ ಅಮ್ಮ ಕೇಳಿದಳು.

''ಹ್ಞೂಂ, ನೋಡಿ ಅಲ್ಲಿ'' ಮೇಸ್ತ್ರಿ ಗೇಟಿನ ಹೊರಗೆ ತೋರಿಸಿದ. ಅಲ್ಲಿ ಕೆಂಪು ಸೀರೆ ಉಟ್ಟ ತೆಳು, ಬಿಳಿ ಹೆಂಗಸೊಬ್ಬಳು ನಿಂತಿದ್ದಳು.

''ತೋಟದ ಕೆಲಸ, ಮನೆ ಕೆಲಸ ಎಲ್ಲಾ ಬರುತ್ತೆ'' ಮೇಸ್ತ್ರಿ ವಿವರಿಸಿದ.

ಅಮ್ಮ ಏನೋ ಗೊಣಗಿಕೊಂಡು ಒಳ ಹೋದಳು.

ಇಷ್ಟೊತ್ತೂ ತನಗೂ ಇಲ್ಲಿಯ ವಿದ್ಯಾಮಾನಗಳಿಗೂ ಏನೂ ಸಂಬಂಧವೇ ಇಲ್ಲ ಎಂಬಂತೆ ನಿಂತಿದ್ದ ಅಪ್ಪುಕುಟ್ಟ ಸ್ವಾಮಿಯತ್ತ ನೋಡಿ ಮೇಸ್ತ್ರಿ ಹೇಳಿದ, ''ಹೋಗಿ ನಿಮ್ಮ ಸಾಮಾನೆಲ್ಲ ತಗಂಡು ಬಂದು ಆ ಕೋಣೆಯಲ್ಲಿ ಇಡಿ.''

ಅಪ್ಪ ಒಳಹೋದ.

★★★

ಪಾಪು ಮತ್ತೆ ಕಣಕ್ಕೆ ಬಂದು ತಂಗಿಗಾಗಿ ಹುಡುಕಿದ. ಆಕೆ ಬೇಲಿ ದಾಟಿ ಆಚೆ ಹೋಗಿದ್ದಳು. ಇರುವೆ ಸಾಲನ್ನೇ ಅನುಸರಿಸಿ ಹೋಗಿರಬೇಕು. ಪಾಪು ಅತ್ತಲೇ ಹೋದ. ಇರುವೆಗಳು ಈಗ ತಮ್ಮ ಗೂಡನ್ನು ಹುಡುಕಿಕೊಂಡಿರಬೇಕು. ಎಲ್ಲವೂ ಶಿಸ್ತುಬದ್ಧವಾಗಿ, ಸಾಲುಗಟ್ಟಿ ಹುತ್ತವೊಂದರೊಳಗೆ ಹೋಗುತ್ತಿದ್ದವು. ತದೇಕಚಿತ್ತದಿಂದ ಹಿಂಬಾಲಿಸುತ್ತಿದ್ದ ತಂಗಿ ಕೇಳಿದಳು.

''ಅಣ್ಣಾ ಇವಕ್ಕೆ ಎಲ್ಲಿಗೆ ಹೋಗಬೇಕು? ಏನು ಕೆಲಸ ಮಾಡ್ಬೇಕು? ಅಂತ ಹೇಂಗೆ ಗೊತ್ತಾಗುತ್ತೆ?''

''ಗೊತ್ತಿಲ್ಲ ಕಣೆ.''

''ಹುತ್ತದೊಳಗೆ ಕೂತಿರೊ ಎಂತದೋ, ಏನೋ ಮಾಡ್ತಿರಬೇಕು ಅಲ್ವಾ?''

''ಇರ್ಬಹುದು'' ಅಂದ ಪಾಪು. ಅಪ್ಪುಕುಟ್ಟನ ಅಂಡು ಹುಡಿಮಾಡುವ ಕಾರ್ಯಕ್ರಮ ಯಾಕೆ ರದ್ದಾಗಿರಬಹುದು ಎಂದು ಯೋಚಿಸುತ್ತಾ.

## ಪ್ರದೀಪ ಕೆಂಜಿಗೆ

ವಿಜ್ಞಾನದ ವಿದ್ಯಾರ್ಥಿ ಪ್ರದೀಪ ಕಾದಂಬರಿಕಾರ, ಅನುವಾದಕ. ಪೂರ್ಣಚಂದ್ರ ತೇಜಸ್ವಿ ಅವರೊಂದಿಗೆ ಎರಡು ಭಾಗಗಳಲ್ಲಿ ಅವರು ಅನುವಾದಿಸಿರುವ ಹೆನ್ರಿ ಶರಾರೆ ಅವರ 'ಪ್ಯಾಪಿಲಾನ್' ಅತ್ಯಂತ ಪ್ರಸಿದ್ಧವಾಗಿದೆ. 'ಪ್ಯಾಪಿಲಾನ್'ನ ಮೂರನೆಯ ಭಾಗ 'ಬಾಜಿ'ಯನ್ನು ಸ್ವತಃ ಅವರೇ ಅನುವಾದಿಸಿದ್ದಾರೆ. ಅವರ ಕಾದಂಬರಿ – 'ಹೆಬ್ಬಾವಿನೊಂದಿಗೆ ಹೋರಾಟ'. ಮೂಡಿಗೆರೆಯಲ್ಲಿ ಸಂಶೋಧನೆ ಹಾಗೂ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.